# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷಿ ಇಲಾಖೆಯ 2018-19ನೇ ಸಾಲಿನ ರಾಜ್ಯವಲಯ ಬಾಕಿ ಇರುವ ಯೋಜನೆಗಳಿಗೆ ನಾಲ್ಕನೇ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಕೃಇ 70 ಕೃಯೋಕಾ 2018, ದಿನಾಂಕ:10-04-2018. & ದಿ:09-08-2018
2. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 04 ಟಿಎಫ್‌ಪಿ 2018, ದಿ:08-01-2019
3. ಸರ್ಕಾರದ ಆದೇಶ ಸಂಖ್ಯೆ:ಕೃಇ 78 ಕೃಯೋಕಾ 2018, ದಿ:19-04-2018
4. ಸರ್ಕಾರದ ಆದೇಶ ಸಂಖ್ಯೆ:ಕೃಇ 78 ಕೃಯೋಕಾ 2018(ಭಾ-1), ದಿ:31-07-2018
5. ಸರ್ಕಾರದ ಆದೇಶ ಸಂಖ್ಯೆ:ಕೃಇ 26 ಕೃಇಕ 2018, ದಿ:27-07-2018
6. ಸರ್ಕಾರದ ಆದೇಶ ಸಂಖ್ಯೆ:ಕೃಇ 78 ಕೃಯೋಕಾ 2018, ದಿ:19-04-2018
7. ಸರ್ಕಾರದ ಆದೇಶ ಸಂಖ್ಯೆ:ಕೃಇ 108 ಕೃಯೋಕಾ 2018, ದಿ:30-10-2018
8. ಸರ್ಕಾರದ ಆದೇಶ ಸಂಖ್ಯೆ:ಕೃಇ 78 ಕೃಯೋಕಾ 2018, ದಿ:24-11-2018
9. ಸರ್ಕಾರದ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 54 ಜಿಐಇ 2018, ದಿ:08-01-2019
10. ಸರ್ಕಾರದ ಆದೇಶ ಸಂಖ್ಯೆ:ಕೃಇ 78 ಕೃಯೋಕಾ 2018, ದಿ:08-02-2019
11. ಸರ್ಕಾರದ ಆದೇಶ ಸಂಖ್ಯೆ:ಕೃಇ 78 ಕೃಯೋಕಾ 2018, ದಿ:25-02-2019
12. ಕೃಷಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಪಿಎಲ್‌ಎನ್/ತಾಂ-1/ ಅನುದಾನ ಬಿಡುಗಡೆ/18-19 ಬೆಂಗಳೂರು, ದಿ:05-03-2019

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ 2017-18ನೇ ಸಾಲಿನಲ್ಲಿ ಕೃಷಿ ಇಲಾಖೆಯಲ್ಲಿ ಚಾಲ್ತಿಯಲ್ಲಿದ್ದ ಯೋಜನೆಗಳನ್ನು 2018-19ನೇ ಸಾಲಿನಲ್ಲಿ ಮುಂದುವರೆಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ (2)ರ ಆದೇಶದನ್ವಯ ರಾಜ್ಯ ಯೋಜನೆಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಪ್ರತಿ ತ್ರೈಮಾಸಿಕದಲ್ಲಿ ಶೇ.25 ರಂತೆ ಒಟ್ಟು ಶೇ.75 ರಷ್ಟು ವೆಚ್ಚ ಭರಿಸಿರುವ ಲೆಕ್ಕಶೀರ್ಷಿಕೆಗಳಡಿ ಮಾತ್ರ ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಲು ಸರ್ಕಾರದ ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಮೇಲೆ ಓದಲಾದ (3) ರ ಸರ್ಕಾರದ ಆದೇಶದಲ್ಲಿ 2018-19ನೇ ಸಾಲಿನಲ್ಲಿ ಮುಂದುವರೆಸಲಾದ ರಾಜ್ಯವಲಯ ಯೋಜನೆಗಳಿಗೆ ಮೊದಲನೇ ತ್ರೈಮಾಸಿಕಕ್ಕೆ ಒಟ್ಟು ರೂ.62902.50 ಲಕ್ಷಗಳ(ಅರವತ್ತೆರಡು ಸಾವಿರದ ಒಂಬೈನೂರ ಎರಡು ಲಕ್ಷಗಳು ಮತ್ತು ಐವತ್ತು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (4) ರ ಸರ್ಕಾರದ ಆದೇಶದಲ್ಲಿ 2018-19ನೇ ಸಾಲಿನಲ್ಲಿ ಮುಂದುವರೆಸಲಾದ ರಾಜ್ಯವಲಯ ಯೋಜನೆಗಳ ಪೈಕಿ "ಇತರೆ ಕೃಷಿ ಯೋಜನೆಗಳು "- 2401-00-102-0-028 " ಅಡಿ ರೈತರ ಆಕಸ್ಮಿಕ ಮರಣ ಹಾಗೂ ಹಾವು ಮತ್ತು ಬಣವೆಗಳ ನಷ್ಟ ಪರಿಹಾರ ಕಾರ್ಯಕ್ರಮಕ್ಕೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಆರ್ಥಿಕ ಇಲಾಖೆಯು ನೀಡಿರುವ ಅನುಮೋದನೆಯನ್ವಯ ಎರಡನೇ ತ್ರೈಮಾಸಿಕಕ್ಕೆ ರೂ.1500.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (5) ರ ಸರ್ಕಾರದ ಆದೇಶದಲ್ಲಿ 2018-19ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ: 2401-00-103-0-15 (106) ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ಕರ್ನಾಟಕ ರಾಜ್ಯ ಬೀಜ ನಿಗಮ (ನಿ) ಕ್ಕೆ ರೂ.2439.02 ಲಕ್ಷಗಳನ್ನು ಎರಡನೇ ಕಂತಿನ ಅನುದಾನದಿಂದ ಮುಂಗಡವಾಗಿ ಬಿಡುಗಡೆಗೊಳಿಸಲಾಗಿದೆ.

ಮೇಲೆ ಓದಲಾದ (6) ರ ಸರ್ಕಾರದ ಆದೇಶದಲ್ಲಿ 2018-19ನೇ ಸಾಲಿನಲ್ಲಿ ಮುಂದುವರೆಸಲಾದ ರಾಜ್ಯವಲಯ ಯೋಜನೆಗಳಿಗೆ ಎರಡನೇ ತ್ರೈಮಾಸಿಕಕ್ಕೆ ಈಗಾಗಲೇ ಉಲ್ಲೇಖ (4) ಮತ್ತು (5) ರಲ್ಲಿ ಬಿಡುಗಡೆ ಮಾಡಿದ ಮೊತ್ತವನ್ನು ಹೊರತುಪಡಿಸಿ, ಉಳಿದ ರೂ.49,203.73 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (7) ರ ಸರ್ಕಾರದ ಆದೇಶದಲ್ಲಿ 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ " ಶೂನ್ಯ ಬಂಡವಾಳ ಸಹಜ ಕೃಷಿ " ಹೊಸ ಯೋಜನೆ ಅನುಷ್ಠಾನಕ್ಕಾಗಿ ಲೆಕ್ಕಶೀರ್ಷಿಕೆ; 2401-00-104-0-12 ಉಪ ಲೆಕ್ಕಶೀರ್ಷಿಕೆ-059 ರಡಿ ವಿವಿಧ ಕೃಷಿ ಹಾಗೂ ತೋಟಗಾರಿಕೆ ವಿಶ್ವ ವಿದ್ಯಾಲಯಗಳಿಗೆ ಪ್ರತಿ ORP ತಂಡಕ್ಕೆ ರೂ.50.00 ಲಕ್ಷಗಳಂತೆ ಒಟ್ಟು ರೂ.550.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

ಮೇಲೆ ಓದಲಾದ (8) ರ ಸರ್ಕಾರದ ಆದೇಶದಲ್ಲಿ 2018-19ನೇ ಸಾಲಿನಲ್ಲಿ ಮುಂದುವರೆಸಲಾದ ರಾಜ್ಯವಲಯ ಯೋಜನೆಗಳಿಗೆ ಮೂರನೇ ತ್ರೈಮಾಸಿಕಕ್ಕೆ ಒಟ್ಟು ರೂ.58051.77 ಲಕ್ಷಗಳ(ಐವತ್ತೆಂಟು ಸಾವಿರದ ಐವತ್ತೊಂದು ಲಕ್ಷ ಮತ್ತು ಎಪ್ಪತ್ತೇಳು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (9) ರ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿಯನ್ವಯ 2018-19ನೇ ಸಾಲಿನ ಪರಿಷ್ಕೃತ ಅಂದಾಜು ಹಾಗೂ ಆಯವ್ಯಯ ಅಂದಾಜಿನ ವ್ಯತ್ಯಾಸವಿರುವ ಉದ್ದೇಶಿತ ಶೀರ್ಷಿಕೆಯನ್ವಯ ಅನುದಾನದ ವ್ಯತ್ಯಾಸವನ್ನು ಪರಿಗಣಿಸಲಾಗಿದೆ.

ಮೇಲೆ ಓದಲಾದ (10) ರ ಸರ್ಕಾರದ ಆದೇಶದಲ್ಲಿ 2018-19ನೇ ಸಾಲಿನಲ್ಲಿ ಮುಂದುವರೆಸಲಾದ ರಾಜ್ಯವಲಯ ಯೋಜನೆಗಳಡಿ ಈಗಾಗಲೇ ಮೂರು ತ್ರೈಮಾಸಿಕಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ಶೇ.75 ರಷ್ಟು ವೆಚ್ಚ ಭರಿಸಿರುವ ಲೆಕ್ಕಶೀರ್ಷಿಕೆಗಳಡಿ ಮಾತ್ರ ನಾಲ್ಕನೇ ತ್ರೈಮಾಸಿಕಕ್ಕೆ ಒಟ್ಟು ರೂ.35818.55 ಲಕ್ಷಗಳ(ಮೂವತ್ತೈದು ಸಾವಿರದ ಎಂಟನೂರ ಹದಿನೆಂಟು ಲಕ್ಷ ಮತ್ತು ಐವತ್ತೈದು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (11) ರ ಸರ್ಕಾರದ ಆದೇಶದಲ್ಲಿ 2018-19ನೇ ಸಾಲಿನ ಅನುದಾನದಲ್ಲಿ ದಿ:08-02-2019ರಂದು ನಾಲ್ಕನೇ ಕಂತಿನ ಅನುದಾನ ಬಿಡುಗಡೆ ಮಾಡಿ ಹೊರಡಿಸಲಾದ ಆದೇಶದಲ್ಲಿ ಶೇ.75ರಷ್ಟು ವೆಚ್ಚವಾಗದೆ ಇದ್ದ ಕೆಲವು ಉಪಶೀರ್ಷಿಕೆಗಳ ಅನುದಾನ ತಡೆಹಿಡಿಯಲಾದ ಲೆಕ್ಕಶೀರ್ಷಿಕೆಗಳ ಉಪಶೀರ್ಷಿಕೆಗಳಲ್ಲಿ ಶೇ.75ರಷ್ಟು ಅನುದಾನ ವೆಚ್ಚವಾಗಿರುವುದನ್ನು ಪರಿಗಣಿಸಿ, ಬಾಕಿ ಇದ್ದ ನಾಲ್ಕನೇ ತ್ರೈಮಾಸಿಕದ ಒಟ್ಟು ರೂ.7281.00ಲಕ್ಷಗಳ (ಏಳು ಸಾವಿರದ ಇನ್ನೂರ ಎಂಬತ್ತೊಂದು ಲಕ್ಷ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

--3

ಮೇಲೆ ಓದಲಾದ (12)ರ ಪ್ರಸ್ತಾವನೆಯಲ್ಲಿ ಕೃಷಿ ಆಯುಕ್ತರು ಮೇಲೆ ಓದಲಾದ (10) ಮತ್ತು (11)ರ ಸರ್ಕಾರದ ಆದೇಶಗಳಲ್ಲಿ ಶೇ.75ಕ್ಕಿಂತ ಕಡಿಮೆ ಇದ್ದ ಕಾರಣ ಕೆಲವು ಯೋಜನೆಗಳ ಉಪಶೀರ್ಷಿಕೆಗಳಡಿ ನಾಲ್ಕನೇ ತ್ರೈಮಾಸಿಕಕ್ಕೆ ಅನುದಾನ ಬಿಡುಗಡೆ ಮಾಡದೆ ಬಾಕಿ ಇರಿಸಲಾಗಿದ್ದು, ಪ್ರಸ್ತುತ ಸದರಿ ಲೆಕ್ಕ ಶೀರ್ಷಿಕೆಗಳ ಉಪಶೀರ್ಷಿಕೆಗಳಲ್ಲಿ ಬದ್ಧ ವೆಚ್ಚವು ಸೇರಿಸಿ, ಶೇ.75ರಷ್ಟು ಪ್ರಗತಿಯಾಗಿರುವುದರಿಂದ, ಬಾಕಿ ಇರುವ ಉಪಶೀರ್ಷಿಕೆಗಳಿಗೆ ನಾಲ್ಕನೇ ತ್ರೈಮಾಸಿಕ್ಕೆ ಒಟ್ಟು ರೂ.22253.51 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕೃಷಿ ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಿ, ಮೇಲೆ ಓದಲಾದ (2) ರ ಸರ್ಕಾರದ ಆದೇಶದನ್ವಯ ಈಗಾಗಲೇ ಮೂರು ತ್ರೈಮಾಸಿಕಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ಈವರೆವಿಗೂ ಶೇ.75 ರಷ್ಟು ವೆಚ್ಚ ಭರಿಸಿರುವ ಲೆಕ್ಕಶೀರ್ಷಿಕೆಗಳಿಗೆ ಮಾತ್ರ ಮೇಲೆ ಓದಲಾದ(10) & (11) ರ ಆದೇಶಗಳಲ್ಲಿ ನಾಲ್ಕನೇ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡಲಾಗಿತ್ತು. ಪ್ರಸ್ತುತ ಇನ್ನು ಕೆಲವು ಉಪಶೀರ್ಷಿಕೆಗಳಲ್ಲಿ ಶೇ.75ರಷ್ಟು ವೆಚ್ಚ ಭರಿಸಿರುವುದನ್ನು ಪರಿಗಣಿಸಿ, ಅಂತಹ ಉಪಶೀರ್ಷಿಕೆಗಳಿಗೂ ಸಹ ತಡೆಹಿಡಿಯಲಾಗಿದ್ದ ನಾಲ್ಕನೇ ಕಂತಿನ ಅನುದಾನ ಬಿಡುಗಡೆ ಮಾಡಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಕೃಇ 78 ಕೃಯೋಕಾ 2018, ಬೆಂಗಳೂರು, ದಿನಾಂಕ:20-03-2019.

**ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2018-19ನೇ ಸಾಲಿನ ಅನುದಾನದಲ್ಲಿ ದಿ:08-02-2019ರಂದು ನಾಲ್ಕನೇ ಕಂತಿನ ಅನುದಾನ ಬಿಡುಗಡೆ ಮಾಡಿ ಹೊರಡಿಸಲಾದ ಆದೇಶದಲ್ಲಿ ಶೇ.75ರಷ್ಟು ವೆಚ್ಚವಾಗದೆ ಇದ್ದ ಕೆಳಕಂಡ ಕೆಲವು ಉಪಶೀರ್ಷಿಕೆಗಳ ಅನುದಾನ ತಡೆಹಿಡಿಯಲಾಗಿತ್ತು. ಪ್ರಸ್ತುತ ಸದರಿ ಲೆಕ್ಕಶೀರ್ಷಿಕೆಗಳ ಉಪಶೀರ್ಷಿಕೆಗಳಲ್ಲಿ ಇತ್ತೀಚೆಗೆ ಶೇ.75ರಷ್ಟು ಅನುದಾನ ವೆಚ್ಚವಾಗಿರುವುದನ್ನು ಪರಿಗಣಿಸಿ, ಈ ಕೆಳಕಂಡ ಎರಡು ರಾಜ್ಯವಲಯ ಯೋಜನೆಗಳಿಗೆ ಬಾಕಿ ಇದ್ದ ನಾಲ್ಕನೇ ತ್ರೈಮಾಸಿಕದ ಒಟ್ಟು ರೂ.2247.20ಲಕ್ಷಗಳ (ಎರಡು ಸಾವಿರದ ಇನ್ನೂರ ನಲ್ವತ್ತೇಳು ಲಕ್ಷಗಳು ಮತ್ತು ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲಾಗಿದೆ.**

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಯೋಜನೆ | ಲೆಕ್ಕಶೀರ್ಷಿಕೆ | ಉಪ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಿರುವ ಒಟ್ಟು ಮೊತ್ತ (ಉ.ಶೀ.ಗಳಿಗೆ) | ನಾಲ್ಕನೇ ತ್ರೈಮಾಸಿಕಕ್ಕೆ ಬಿಡುಗಡೆ ಮಾಡಿರುವ ಅನುದಾನ |
|---|---|---|---|---|---|
| 1. | ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ | 2401-00-103-0-15 | 103 (*) | 4788.00 | 1197.00 |
| | | | 059 | 1672.00 | 418.00 |
| 2. | ಕೃಷಿ ವಿಸ್ತರಣೆ ಮತ್ತು ತರಬೇತಿ | 2401-00-109-0-21 | 059 | 3161.00 | 632.20 |
| | ಒಟ್ಟು | | | **9621.00** | **2247.20** |

(*) ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ ಯೋಜನೆಯ ಲೆಕ್ಕಶೀರ್ಷಿಕೆ-2401-00-103-0-15 ರಡಿಯ ಉಪಶೀರ್ಷಿಕೆ-103 ರಡಿ ಪ್ರಸ್ತುತ ಕೆ2 ತಂತ್ರಾಂಶದಲ್ಲಿ ಪ್ರಸಕ್ತ ಲಭ್ಯವಿರುವ (ರೂ.240.00 ಲಕ್ಷಗಳು) ಅನುದಾನವನ್ನು ಬಿಡುಗಡೆ ಮಾಡಿ, ಉಳಿಕೆ ವ್ಯತ್ಯಾಸದ ಮೊತ್ತವನ್ನು ಕೆ2 ತಂತ್ರಾಂಶದಲ್ಲಿ ಲಭ್ಯವಾದಾಗ ಬಿಡುಗಡೆಗೆ ಕ್ರಮವಹಿಸಲಾಗುವುದು.

--4

ರಾಜ್ಯವಲಯ ಯೋಜನೆಗಳಡಿ ಆಗಿಂದ್ದಾಗೆ ಹೊರಡಿಸಲಾಗುವ ಮಾರ್ಗ ಸೂಚಿಗಳನ್ನು ಅನುಸರಿಸಿ ಕೃಷಿ ಆಯುಕ್ತರು ಯೋಜನೆಗಳನ್ನು ಅನುಷ್ಠಾನಗೊಳಿಸುವುದು. ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ/04/ಟಿಎಫ್‌ಪಿ/2018, ದಿನಾಂಕ:08-01-2019ರ ಆದೇಶದಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ನೀಡಲಾಗಿರುವ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagarathnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

ಪ್ರತಿಯನ್ನು:-

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್‌ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು, (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
3. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ: 5329, ಬೆಂಗಳೂರು-01.
4. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ಆಯುಕ್ತರು/ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
6. ಆಯುಕ್ತರು, ತೋಟಗಾರಿಕೆ ಇಲಾಖೆ, ಬೆಂಗಳೂರು
7. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು
8. ನಿರ್ದೇಶಕರು, ಪರಿಯೋಜನಾ ರಚನಾ ವಿಭಾಗ, ಯೋಜನಾ ವಿಭಾಗ, ಬೆಂಗಳೂರು.
9. ಉಪ ನಿರ್ದೇಶಕರು, ಟಿಎನ್‌ಎಂಸಿ, ಖನಿಜಭವನ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿ -1, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
11. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4), ವಿಧಾನ ಸೌಧ, ಬೆಂಗಳೂರು
13. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು
14. ಸರ್ಕಾರದ ಜಂಟಿ/ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಶಾಖೆ.
15. ಜಂಟಿ ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು.
16. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು ರವರಿಗೆ ಮಾಹಿತಿಗಾಗಿ ನೀಡಲಾಗಿದೆ.(ಕೃಷಿ ಆಯುಕ್ತರ ಮುಖಾಂತರ).
17. ತಾಂತ್ರಿಕ ಅಧಿಕಾರಿಗಳು, ಕೃಷಿ ಯೋಜನಾ ಘಟಕ, ಎ ಮತ್ತು ಬಿ, ಕೃಷಿ ಇಲಾಖೆ.
18. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.